Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**
ವಿಶೇಷ ಸಂಚಿಕೆ


भाग—IX     अनुभाग 1
PART IX     SECTION 1
ಭಾಗ IX     ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं—1 | नई दिल्ली सोमवार, जून 17, 1985 | जेष्ट—27 1907 (शक) | खण्ड—2 |
| No. 1 | New Delhi Monday, June 17, 1985 | Jaistha 27, 1907 (Saka) | Vol. 2 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಜೂನ್ ೧೭, ೧೯೮೫ | ಜ್ಯೇಷ್ಠ ೨೭, ೧೯೦೭ (ಶಕ) | ಸಂಪುಟ ೨ |


## MINISTRY OF LAW, AND JUSTICE

(Legislative Department)

New Delhi, February 27, 1985/Falguna 1906 (Sakha)

The translations in Kannada of the following namely.—(1) The Two Members constituencies (Abolition) Act, 1961, (2) The Apprntices Act, 1961 (3) The Haj Committee Act, 1959 (4) The Working Journalists (Fixation of Rates of Wages) Act, 1958 (5) The Indian Trust Act, 1882. are hereby published under the authority of the president and shall be deemed to be the authorised translations thereof in Kannada under clause (a) of Section 2 of the authorised Translations (central lwas) Act, 1973 (50 of 1973).

ಕೆಳಕಂಡ ಅಧಿನಿಯಮಗಳ ಎಂದರೆ, (೧) ದ್ವಿಸದಸ್ಯ ಚುನಾವಣಾ ಕ್ಷೇತ್ರಗಳ (ರದ್ದಿಯಾತಿ) ಅಧಿನಿಯಮ, ೧೯೬೧ ; (೨) ಉಮೇದುವಾರರ ಅಧಿನಿಯಮ, ೧೯೬೧ ; (೩) ಹಜ್ ಸಮಿತಿ ಅಧಿನಿಯಮ, ೧೯೫೯ ; (೪) ಕಾರ್ಯನಿರತ ಪತ್ರಿಕೋದ್ಯಮಿ (ಮಜೂರಿ ದರ ನಿಗದಿ) ಅಧಿನಿಯಮ, ೧೯೫೮ ; (೫) ಭಾರತ ನ್ಯಾಸ ಅಧಿನಿಯಮ, ೧೮೮೨—ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ (ಕೇಂದ್ರ ಕಾನೂನುಗಳ) ಅಧಿನಿಯಮ, ೧೯೭೩ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

# ದ್ವಿಸದಸ್ಯ ಚುನಾವಣಾ ಕ್ಷೇತ್ರಗಳ (ರದ್ದಿಯಾತಿ) ಅಧಿನಿಯಮ, 1961

(1961ರ ಅಧಿನಿಯಮ ಸಂಖ್ಯೆ 1) [ಮಾರ್ಚ್ 9, 1961]

[ಜನವರಿ 1, 1985 ರಂದು ಜಾರಿಯಲ್ಲಿದ್ದಂತೆ]

ದ್ವಿಸದಸ್ಯ ಸಂಸದೀಯ ಮತ್ತು ವಿಧಾನಸಭಾ ಚುನಾವಣಾ ಕ್ಷೇತ್ರಗಳನ್ನು ರದ್ದುಗೊಳಿಸಲು ಮತ್ತು ಅವುಗಳ ಬದಲು ಏಕ ಸದಸ್ಯ ಚುನಾವಣಾ ಕ್ಷೇತ್ರಗಳನ್ನು ಸೃಜಿಸಲು ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಹನ್ನೆರಡನೇ ವರ್ಷದಲ್ಲಿ ಸಂಸತ್ತಿನಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1. ಸಂಕ್ಷಿಪ್ತ ಹೆಸರು.--(1) ಈ ಅಧಿನಿಯಮವನ್ನು ದ್ವಿಸದಸ್ಯ ಚುನಾವಣಾ ಕ್ಷೇತ್ರಗಳ (ರದ್ದಿಯಾತಿ) ಅಧಿನಿಯಮ, 1961 ಎಂದು ಕರೆಯತಕ್ಕದ್ದು.

2. ಪರಿಭಾಷೆಗಳು.—ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿದ್ದ ಹೊರತು,—

(ಕ) "ಆಯೋಗ" ಎಂದರೆ ಸಂವಿಧಾನದ 324ನೇ ಅನುಚ್ಛೇದದ ಮೇರೆಗೆ ರಾಷ್ಟ್ರಪತಿಯಿಂದ ನಿಯುಕ್ತವಾದ ಚುನಾವಣಾ ಆಯೋಗ.

(ಖ) "ಪರಿಸೀಮನ ಆದೇಶ" ಎಂದರೆ 1956ರ ಸಂಸದೀಯ ಮತ್ತು ವಿಧಾನ ಸಭಾ ಚುನಾವಣಾ ಕ್ಷೇತ್ರಗಳ ಪರಿಸೀಮನ ಆದೇಶ;

(ಗ) "ಹಾಲಿ ಸದಸ್ಯ" ಎಂದರೆ ಸಂಬಂಧಪಟ್ಟ ರಾಜ್ಯ ಸರ್ಕಾರಿ ರಾಜಪತ್ರದಲ್ಲಿ 4ನೇ ಪ್ರಕರಣದ (ಗ) ಖಂಡದ ಮೇರೆಗೆ ಅಧಿಸೂಚನೆಯು ಪ್ರಕಟವಾದ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ, ಆ ರಾಜ್ಯದಿಂದ ಲೋಕ ಸಭೆಯ ಅಥವಾ ಸಂದರ್ಭಾನುಸಾರ, ಆ ರಾಜ್ಯದ ವಿಧಾನಸಭೆಯ ಸದಸ್ಯನಾಗಿರುವ ವ್ಯಕ್ತಿ;

(ಘ) "ರಾಜ್ಯ" ಎಂಬುದರಲ್ಲಿ ಸಂಘ ರಾಜ್ಯಕ್ಷೇತ್ರವೂ ಸೇರುತ್ತದೆ;

(ಙ) "ದ್ವಿಸದಸ್ಯ ಚುನಾವಣಾ ಕ್ಷೇತ್ರ" ಎಂದರೆ ಪರಿಸೀಮನ ಆದೇಶದ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ದ್ವಿಸದಸ್ಯ ಸಂಸದೀಯ ಚುನಾವಣಾ ಕ್ಷೇತ್ರ, ಅಥವಾ ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ದ್ವಿಸದಸ್ಯ ವಿಧಾನಸಭಾ ಚುನಾವಣಾ ಕ್ಷೇತ್ರ.

3. ದ್ವಿಸದಸ್ಯ ಚುನಾವಣಾ ಕ್ಷೇತ್ರಗಳನ್ನು ವಿಭಾಗಿಸುವುದು.—ಆಯೋಗವು, ಕಾರ್ಯ ಸಾಧ್ಯವಾದಷ್ಟು ಬೇಗನೆ ಮತ್ತು ಇಲ್ಲಿ ಉಪಬಂಧಿಸಲಾದ ರೀತಿಯಲ್ಲಿ, ಪ್ರತಿಯೊಂದು ದ್ವಿಸದಸ್ಯ ಚುನಾವಣಾ ಕ್ಷೇತ್ರವನ್ನು (ಗುಜರಾತ್ ರಾಜ್ಯದಲ್ಲಿರುವ ದ್ವಿಸದಸ್ಯ ವಿಧಾನಸಭಾ ಚುನಾವಣಾ ಕ್ಷೇತ್ರವನ್ನು ಬಿಟ್ಟು ಇತರ) ಎರಡು ಏಕ ಸದಸ್ಯ ಚುನಾವಣಾ ಕ್ಷೇತ್ರಗಳಾಗಿ ವಿಭಾಗಿಸತಕ್ಕದ್ದು. ಅವುಗಳ ವ್ಯಾಪ್ತಿಯನ್ನು ಪರಿಸೀಮನ ಮಾಡತಕ್ಕದ್ದು ಮತ್ತು ಈ ಕೆಳಕಂಡ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳಲ್ಲಿ ಸ್ಥಾನವನ್ನು ಯಾವುದರಲ್ಲಿ ಅನುಸೂಚಿತ ಜಾತಿಗೆ ಅಥವಾ ಸಂದರ್ಭಾನುಸಾರ ಅನುಸೂಚಿತ ತಂಡಕ್ಕೆ ಮೀಸಲಿರಿಸಬೇಕೆಂಬುದನ್ನು ನಿರ್ಧರಿಸತಕ್ಕದ್ದು. ಎಂದರೆ.—

(ಕ) ಎಲ್ಲ ಏಕ ಸದಸ್ಯ ಚುನಾವಣಾ ಕ್ಷೇತ್ರಗಳು, ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಭೌಗೋಳಿಕವಾಗಿ ಸಮಗ್ರ ಪ್ರದೇಶವಾಗಿರತಕ್ಕದ್ದು ಮತ್ತು ಅವುಗಳನ್ನು ಪರಿಸೀಮನಗೊಳಿಸುವಾಗ ಭೌತಿಕ ಲಕ್ಷಣಗಳು, ಸದ್ಯದ ಆಡಳಿತ ಘಟಕಗಳ ಗಡಿಗಳು, ಸಂಪರ್ಕ ಸೌಲಭ್ಯಗಳು ಮತ್ತು ಸಾರ್ವಜನಿಕ ಅನುಕೂಲ ಸೌಲಭ್ಯಗಳು—ಇವುಗಳನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು; ಮತ್ತು

(ಖ) ಯಾವ ಏಕ ಸದಸ್ಯ ಚುನಾವಣಾ ಕ್ಷೇತ್ರದಲ್ಲಿ, ಅನುಸೂಚಿತ ಜಾತಿಯ, ಸಂದರ್ಭಾನುಸಾರ ಅನುಸೂಚಿತ ತಂಡದ ಜನಸಂಖ್ಯೆಯು ಹೆಚ್ಚು ಇದೆ ಎಂದು ಆಯೋಗವು ಅಭಿಪ್ರಾಯಪಡುತ್ತದೆಯೋ ಆ ಕ್ಷೇತ್ರದಲ್ಲಿ ಆ ಸ್ಥಾನವನ್ನು ಮೀಸಲಿಡತಕ್ಕದ್ದು.

ವಿವರಣೆ.—ಈ ಪ್ರಕರಣದಲ್ಲಿ "ಜನಸಂಖ್ಯೆ" ಎಂದರೆ 1951ರಲ್ಲಿ ನಡೆದ ಜನಗಣತಿಯಲ್ಲಿ ಖಚಿತಪಡಿಸಿದ ಜನಸಂಖ್ಯೆ.

4. ವಿಭಜನೆಯ ವಿಧಾನ.—ಆಯೋಗವು, ಪ್ರತಿಯೊಂದು ರಾಜ್ಯಕ್ಕೆ ಸಂಬಂಧಪಟ್ಟಂತೆ—

(ಕ) 3ನೇ ಪ್ರಕರಣದಲ್ಲಿ ಸೂಚಿಸಲಾದ ವಿಷಯಗಳ ಸಂಬಂಧದಲ್ಲಿ ತನ್ನ ಪ್ರಸ್ತಾವಗಳನ್ನು ರೂಪಿಸತಕ್ಕದ್ದು ಮತ್ತು ಭಾರತ ರಾಜಪತ್ರದಲ್ಲಿ, ರಾಜ್ಯದ ರಾಜಪತ್ರದಲ್ಲಿ ಮತ್ತು ಆಯೋಗವು ಮುಖ್ಯವಾದವುಗಳೆಂದು ಭಾವಿಸುವಂಥ ರಾಜ್ಯದ ಪ್ರಾದೇಶಿಕ ಭಾಷೆಗಳ ವೃತ್ತ ಪತ್ರಿಕೆಗಳಲ್ಲಿ ಅವುಗಳನ್ನು ಮತ್ತು ಆ ಪ್ರಸ್ತಾವಗಳಿಗೆ ಸಂಬಂಧಪಟ್ಟಂತೆ ಆಕ್ಷೇಪಣೆಗಳು ಮತ್ತು ಸೂಚನೆಗಳನ್ನು ಆಹ್ವಾನಿಸುವ ಮತ್ತು ಯಾವ ದಿನಾಂಕದಂದು ಅಥವಾ ಅದರ ತರುವಾಯ ಪ್ರಸ್ತಾವಗಳನ್ನು ಮತ್ತಷ್ಟು ಪರಿಶೀಲಿಸಲಾಗುವುದೆಂಬುದನ್ನು ನಿರ್ದಿಷ್ಟಪಡಿಸುವ ಒಂದು ನೋಟೀಸು ಸಹಿತವಾಗಿ ಪ್ರಕಟಿಸತಕ್ಕದ್ದು;

(ಖ) ಹಾಗೆ ನಿರ್ದಿಷ್ಟಪಡಿಸಲಾದ ದಿನಾಂಕದೊಳಗೆ ಸ್ವೀಕರಿಸಿರಬಹುದಾದ ಎಲ್ಲ ಆಕ್ಷೇಪಣೆಗಳು ಮತ್ತು ಸೂಚನೆಗಳನ್ನು ಪರಿಶೀಲಿಸಿದ ತರುವಾಯ 3ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ವಿಷಯಗಳನ್ನು ನಿರ್ಧರಿಸತಕ್ಕದ್ದು; ಮತ್ತು

(ಗ) ತನ್ನ ವಿನಿಶ್ಚಯಗಳನ್ನು ಜಾರಿಗೆ ತರಲು ಪರಿಸೀಮನ ಆದೇಶದಲ್ಲಿ ಅವಶ್ಯವೆಂದು ಕಂಡು ಬರುವಂಥ ತಿದ್ದುಪಡಿಗಳನ್ನು ಮಾಡಲು ರಾಜ್ಯದ ಸರ್ಕಾರಿ ರಾಜಪತ್ರದಲ್ಲಿ ಮತ್ತು ಭಾರತ ರಾಜಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸುವ ಮೂಲಕ, ನಿರ್ದೇಶಿಸತಕ್ಕುದು.

5. ವಿಭಜನೆಯ ಪರಿಣಾಮ.—ಸಂಬಂಧಪಟ್ಟ ರಾಜ್ಯದ ಸರ್ಕಾರೀ ರಾಜಪತ್ರದಲ್ಲಿ 4ನೇ ಪ್ರಕರಣದ (ಗ) ಖಂಡದ ಮೇರೆಗೆ ಅಧಿಸೂಚನೆಯು ಪ್ರಕಟವಾದ ತಾರೀಖಿನಲಾಗಾಯ್ತು.—

(ಕ) ರಾಜ್ಯದಲ್ಲಿನ ಪ್ರತಿಯೊಂದು ದ್ವಿಸದಸ್ಯ ಚುನಾವಣಾ ಕ್ಷೇತ್ರವು (ಗುಜರಾತ್ ರಾಜ್ಯದ ದ್ವಿಸದಸ್ಯ ವಿಧಾನಸಭಾ ಚುನಾವಣಾ ಕ್ಷೇತ್ರವನ್ನು ಬಿಟ್ಟು) ಅಸ್ತಿತ್ವದಲ್ಲಿರುವುದು ನಿಂತು ಹೋಗತಕ್ಕುದು ಮತ್ತು, ಅದಕ್ಕೆ ಬದಲಾಗಿ, ತಿದ್ದುಪಡಿಯಾದ ಪರಿಸೀಮನ ಆದೇಶದಲ್ಲಿ ಉಪಬಂಧಿಸಲಾದಂತೆ ಎರಡು ಏಕ ಸದಸ್ಯ ಚುನಾವಣಾ ಕ್ಷೇತ್ರಗಳು (ಇನ್ನು ಮುಂದೆ "ಹೊಸ ಸಂವಾದಿ ಚುನಾವಣಾ ಕ್ಷೇತ್ರಗಳು ಎಂದು ಉಲ್ಲೇಖಿಸಲಾಗುವಂಥವು) ಅಸ್ತಿತ್ವಕ್ಕೆ ಬರತಕ್ಕುದು;

(ಖ) ರಾಜ್ಯದ ಯಾವುದೇ ದ್ವಿಸದಸ್ಯ ಚುನಾವಣಾ ಕ್ಷೇತ್ರದಲ್ಲಿ ಮೀಸಲಿದ ಸ್ಥಾನವನ್ನು ಭರ್ತಿ ಮಾಡಲು ಆಯ್ಕೆ ಮಾಡಲಾದ ಹಾಲಿ ಸದಸ್ಯನನ್ನು, ಯಾವುದರಲ್ಲಿ ಸ್ಥಾನವನ್ನು ಮೀಸಲಾಗಿರಿಸಿದೆಯೋ ಆ ಹೊಸ ಸಂವಾದಿ ಚುನಾವಣಾ ಕ್ಷೇತ್ರಗಳ ಪೈಕಿ ಒಂದರಿಂದ ಲೋಕಸಭೆಗೆ ಅಥವಾ, ಸಂದರ್ಭಾನುಸಾರ, ರಾಜ್ಯ ವಿಧಾನಸಭೆಗೆ ಚುನಾಯಿಸಲಾಗಿದೆಯೆಂದು ಭಾವಿಸತಕ್ಕುದು ಮತ್ತು ಆ ದ್ವಿಸದಸ್ಯ ಚುನಾವಣಾ ಕ್ಷೇತ್ರದ ಮತ್ತೊಬ್ಬ ಹಾಲಿ ಸದಸ್ಯನನ್ನು, ಹೊಸ ಸಂವಾದಿ ಚುನಾವಣಾ ಕ್ಷೇತ್ರಗಳ ಪೈಕಿ ಮತ್ತೊಂದರಿಂದ ಚುನಾಯಿಸಲಾಗಿದೆಯೆಂದು ಭಾವಿಸತಕ್ಕುದು; ಮತ್ತು

(ಗ) ರಾಜ್ಯದ ಯಾವುದೇ ದ್ವಿಸದಸ್ಯ ಚುನಾವಣಾ ಕ್ಷೇತ್ರದಲ್ಲಿ ಉಕ್ತ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಇರುವ ಯಾವುದೇ ಆಕಸ್ಮಿಕ ರಿಕ್ತತೆಯು, ಮೀಸಲು ಸ್ಥಾನದ ರಿಕ್ತತೆಯಾಗಿರುವುದಾದರೆ, ಅದನ್ನು ಹೊಸ ಸಂವಾದಿ ಚುನಾವಣಾ ಕ್ಷೇತ್ರಗಳ ಪೈಕಿ ಒಂದರಲ್ಲಿ ಸ್ಥಾನ ಮೀಸಲಿಟ್ಟಿರುವ ಒಂದು ಚುನಾವಣಾ ಕ್ಷೇತ್ರದ ಆಕಸ್ಮಿಕ ರಿಕ್ತತೆಯೆಂದು ಭಾವಿಸತಕ್ಕುದು ಮತ್ತು ಆಕಸ್ಮಿಕ ರಿಕ್ತತೆಯು ಇನ್ನೊಂದು ಸ್ಥಾನದಲ್ಲಿರುವುದಾದರೆ, ಅದು ಹೊಸ ಸಂವಾದಿ ಚುನಾವಣಾ ಕ್ಷೇತ್ರಗಳ ಪೈಕಿ ಮತ್ತೊಂದರಲ್ಲಿನ ಆಕಸ್ಮಿಕ ರಿಕ್ತ ಸ್ಥಾನವೆಂದು ಭಾವಿಸತಕ್ಕುದು.

6. ಗುಜರಾತ್ ರಾಜ್ಯಕ್ಕೆ ವಿಶೇಷ ಉಪಬಂಧ; 1960ರ 11ನೇ ಅಧಿನಿಯಮದ 19ನೇ ಪ್ರಕರಣದ ತಿದ್ದುಪಡಿ.—1960ರ ಬೊಂಬಾಯಿ ಪುನರ್ರಚನಾ ಅಧಿನಿಯಮದ 19ನೇ ಪ್ರಕರಣದಲ್ಲಿ:—

(ಕ) (2)ನೇ ಉಪ-ಪ್ರಕರಣದಲ್ಲಿ (ಖ) ಖಂಡಕ್ಕೆ ಬದಲಾಗಿ ಈ ಕೆಳಕಂಡ ಖಂಡವನ್ನು ಪ್ರತಿಸ್ಥಾಪಿಸತಕ್ಕುದು, ಎಂದರೆ:-

"(ಖ) ರಾಜ್ಯವನ್ನು ಎಷ್ಟು ವಿಧಾನಸಭಾ ಚುನಾವಣಾ ಕ್ಷೇತ್ರಗಳಾಗಿ ವಿಭಾಗಿಸತಕ್ಕುದು, ಅಂಥ ಪ್ರತಿಯೊಂದು ಚುನಾವಣಾ ಕ್ಷೇತ್ರದ ವ್ಯಾಪ್ತಿ ಮತ್ತು ಅವುಗಳ ಪೈಕಿ ಯಾವ ಸ್ಥಾನಗಳನ್ನು ಅನುಸೂಚಿತ ಜಾತಿಗೆ ಅಥವಾ ಅನುಸೂಚಿತ ತಂಡಕ್ಕೆ ಮೀಸಲಿರಿಸಬೇಕು; ಮತ್ತು"

(ಖ) (3)ನೇ ಉಪ-ಪ್ರಕರಣಕ್ಕೆ ಬದಲಾಗಿ ಕೆಳಕಂಡ ಉಪ-ಪ್ರಕರಣವನ್ನು ಪ್ರತಿಸ್ಥಾಪಿಸತಕ್ಕುದು, ಎಂದರೆ:—

"(3) (2)ನೇ ಉಪ-ಪ್ರಕರಣದ (ಖ) ಮತ್ತು (ಗ) ಖಂಡಗಳಲ್ಲಿ ಉಲ್ಲೇಖಿಸಲಾದ ವಿಷಯಗಳನ್ನು ನಿರ್ಧರಿಸುವಾಗ, ಚುನಾವಣಾ ಆಯೋಗವು ಕೆಳಕಂಡ ಉಪಬಂಧಗಳನ್ನು ಗಮನದಲ್ಲಿಟ್ಟುಕೊಳ್ಳತಕ್ಕುದು, ಎಂದರೆ.—

(ಕ) ಎಲ್ಲ ಚುನಾವಣಾ ಕ್ಷೇತ್ರಗಳು ಏಕಸದಸ್ಯ ಚುನಾವಣಾ ಕ್ಷೇತ್ರಗಳಾಗಿರತಕ್ಕುದು;

(ಖ) ಎಲ್ಲ ಚುನಾವಣಾ ಕ್ಷೇತ್ರಗಳು, ಕಾರ್ಯ ಸಾಧ್ಯವಾದಷ್ಟು ಮಟ್ಟಿಗೆ ಭೌಗೋಳಿಕವಾಗಿ ಸಮಗ್ರ ಪ್ರದೇಶಗಳಾಗಿರತಕ್ಕುದು ಮತ್ತು ಅವುಗಳನ್ನು ಪರಿಸೀಮನಗೊಳಿಸುವಾಗ ಭೌತಿಕ ಲಕ್ಷಣಗಳು ಸದ್ಯದ ಆಡಳಿತ ಘಟಕಗಳ ಗಡಿಗಳು, ಸಂಪರ್ಕ ಸೌಲಭ್ಯಗಳು ಮತ್ತು ಸಾರ್ವಜನಿಕ ಅನುಕೂಲ-ಇವುಗಳನ್ನು ಗಮನದಲ್ಲಿಟ್ಟುಕೊಳ್ಳತಕ್ಕುದು; ಮತ್ತು

(ಗ) ಅನುಸೂಚಿತ ಜಾತಿ ಅಥವಾ ಅನುಸೂಚಿತ ತಂಡಗಳಿಗಾಗಿ ಸ್ಥಾನಗಳನ್ನು ಮೀಸಲಿರಿಸಿರುವ ಚುನಾವಣಾ ಕ್ಷೇತ್ರಗಳು, ಸಾಧ್ಯವಾದಷ್ಟು ಮಟ್ಟಿಗೆ, ಅನುಸೂಚಿತಜಾತಿ ಅಥವಾ, ಸಂದರ್ಭಾನುಸಾರ, ಅನುಸೂಚಿತ ತಂಡದ ಜನಸಂಖ್ಯೆಯು ಅತ್ಯಧಿಕವಾಗಿ ಇರುವ ಪ್ರದೇಶಗಳಲ್ಲಿ ಇರತಕ್ಕುದು; ಆದರೆ ಅನುಸೂಚಿತ ಜಾತಿಗೆ ಸಂಬಂಧಪಟ್ಟಂತೆ, ರಾಜ್ಯದ ಬೇರೆ ಬೇರೆ ಪ್ರದೇಶಗಳಲ್ಲಿ ಮೀಸಲು ಸ್ಥಾನಗಳನ್ನು ಹಂಚಲು ಜಾಗರೂಕತೆ ವಹಿಸತಕ್ಕುದು."

7. ಪರಿಸೀಮನ ಆದೇಶದ ಪರಿಷ್ಕರಣ.—(1) 4ನೇ ಪ್ರಕರಣದ (ಗ) ಖಂಡದ ಮೇರೆಗೆ ಎಲ್ಲ ಅಧಿಸೂಚನೆಗಳನ್ನು ಪ್ರಕಟಿಸಿದ ತರುವಾಯ ಮತ್ತು 1960ರ ಬೊಂಬಾಯಿ ಪುನರ್ರಚನಾ ಅಧಿನಿಯಮದ (1960ರ 11ರ) 19ನೇ ಪ್ರಕರಣದ (5)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಆದೇಶವನ್ನು ಮಾಡಿದ ತರುವಾಯ, ಆಯೋಗವು—

(ಕ) ಎಲ್ಲ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಯ ವಿವರವನ್ನು ಅದ್ಯತನಗೊಳಿಸಿ ಇಡಲು ಮತ್ತು ಪರಿಸೀಮನ ಆದೇಶದ ಅನುಸೂಚಿಗಳಲ್ಲಿ ಅವುಗಳಲ್ಲಿ ಇನ್ನೂ ಹೆಚ್ಚಾಗಿ ಕ್ರಮವಾಗಿ ರೂಪಿಸಲು ಅವಶ್ಯವೆಂದು ಕಂಡು ಬರುವಂಥ ಹೆಚ್ಚಿನ ತಿದ್ದುಪಡಿಗಳನ್ನು ಮಾಡತಕ್ಕುದು; ಮತ್ತು

(ಖ) ಹಾಗೆ ತಿದ್ದುಪಡಿಮಾಡಲಾದ ಮತ್ತು ಪರಿಷ್ಕರಿಸಲಾದ ಪರಿಸೀಮನ ಆದೇಶದ-ಪ್ರಮಾಣೀಕೃತ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಗಳಲ್ಲಿ ಪ್ರತಿಯೊಂದಕ್ಕೆ ಕಳುಹಿಸತಕ್ಕುದು.

(2) ಪರಿಷ್ಕೃತ ಪರಿಸೀಮನ ಆದೇಶವು ತಲುಪಿದ ತರುವಾಯ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಸಾಧ್ಯವಾದಷ್ಟು ಬೇಗನೆ ಅದನ್ನು ಲೋಕಸಭೆ ಅಥವಾ, ಸಂದರ್ಭಾನುಸಾರ, ರಾಜ್ಯದ ವಿಧಾನಸಭೆಯ ಮುಂದೆ ಮಂಡಿಸತಕ್ಕದು.

8. ಪರಿಸೀಮನ ಆದೇಶವನ್ನು ಅದ್ಯತನವಾಗಿ ಇಟ್ಟುಕೊಳ್ಳುವ ಅಧಿಕಾರ.—ಆಯೋಗವು ಕಾಲಕಾಲಕ್ಕೆ, ಭಾರತ ರಾಜಪತ್ರದಲ್ಲಿ ಅಥವಾ ಸಂಬಂಧಪಟ್ಟ ರಾಜ್ಯದ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯನ್ನು ಪ್ರಕಟಿಸುವ ಮೂಲಕ,—

(ಕ) ಪರಿಷ್ಕೃತ ಪರಿಸೀಮನ ಆದೇಶದಲ್ಲಿರುವ ಯಾವುದೇ ಮುದ್ರಣ ದೋಷವನ್ನು ಅಥವಾ ಅಜಾಗರೂಕತೆಯ ಮರೆವಿನಿಂದ ಅಥವಾ ಲೋಪದಿಂದ ಉಂಟಾಗುವ ಯಾವುದೇ ತಪ್ಪನ್ನು ಸರಿಪಡಿಸಬಹುದು, ಮತ್ತು

(ಖ) ಸದರಿ ಆದೇಶದ ಅನುಸೂಚಿಯಲ್ಲಿ ಸೂಚಿಸಲಾದ ಗಡಿಗಳನ್ನು ಅಥವಾ ಯಾವುದೇ ಜಿಲೆಯ ಅಥವಾ ಯಾವುದೇ ರಾಜ್ಯಕ್ಷೇತ್ರ ವಿಭಾಗದ ಹೆಸರನ್ನು ಬದಲಾಯಿಸಿದ್ದರೆ, ಅನುಸೂಚಿಯನ್ನು ಅದ್ಯತನವಾಗಿ ಇರುವಂತೆ ನೋಡಿಕೊಳ್ಳಲು ಅವಶ್ಯವೆಂದು ಅಥವಾ ಯುಕ್ತವೆಂದು ಕಂಡುಬರುವಂಥ ತಿದ್ದುಪಡಿಗಳನ್ನು ಮಾಡಬಹುದು.

The above translation in Kannada of the two Members Constituencies (Abolition) Act, 1961 (Act No. 1 of 1961) has been authorised by the President to be published in the Official Gazette under clause (a) of section 2 of the Authorised Translations (Central Laws) Act, 1973.

*Secretary to the Government of India.*

W D 5913